(204) **ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ :– ಮಾನ್ಯ** ವೈದ್ಯಕೀಯ ಶಿಕ್ಷಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೀದರ್‌ನಲ್ಲಿ ಪ್ರಾರಂಭಿಸಲಾಗಿರುವ ವೈದ್ಯಕೀಯ ಕಾಲೇಜು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದೆಯೇ ;

ಆ) ಇದಕ್ಕಾಗಿ ಇಲ್ಲಿಯವರೆಗೆ ವಿವಿಧ ಬಾಬ್ತುಗಳಲ್ಲಿ ವೆಚ್ಚ ಮಾಡಲಾದ ಹಣವೆಷ್ಟು (ವಿವರಗಳನ್ನು ಒದಗಿಸುವುದು) ;

ಇ) ಈ ಕಾಲೇಜಿಗೆ ಮಂಜೂರಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು (ವೈದ್ಯಕೀಯ ಮತ್ತು ವೈದ್ಯಕೀಯೇತರ ಹುದ್ದೆಗಳ ವಿವರಗಳನ್ನು ಒದಗಿಸುವುದು) ;

ಈ) ಆ ಪೈಕಿ ಎಷ್ಟು ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡಲಾಗಿದೆ ; ಎಷ್ಟು ಹುದ್ದೆಗಳನ್ನು ತಾತ್ಕಾಲಿಕವಾಗಿ ಭರ್ತಿ ಮಾಡಲಾಗಿದೆ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು

ಉ) ಈ ಹುದ್ದೆಗಳನ್ನು ಭರ್ತಿ ಮಾಡುವಾಗ ಅನುಸರಿಸಲಾದ ನೀತಿ ನಿಯಮಗಳೇನು

ಊ) ಮೀಸಲಾತಿಯ ಅನುಸಾರ ನೇಮಕಾತಿ ಮಾಡಲಾಗಿದೆಯೇ ;

ಋ) ಎಂ.ಸಿ.ಐ.ನ ನಿಯಮಗಳನ್ನು ಪೂರೈಸುವ ಸಲುವಾಗಿ ಈ ಕಾಲೇಜಿನಲ್ಲಿ ಕೆಲವು ಹುದ್ದೆಗಳನ್ನು ತಾತ್ಕಾಲಿಕವಾಗಿ ಭರ್ತಿ ಮಾಡಿಕೊಂಡು ಅನಂತರ ಆ ಹುದ್ದೆಗಳಲ್ಲಿ ಇದ್ದವರುಗಳನ್ನು ಸೇವೆಯಿಂದ ತೆಗೆದುಹಾಕಿರುವುದು ನಿಜವೇ, ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ;

ಎ) ಹಾಗಿದ್ದಲ್ಲಿ, ಮಾನವೀಯ ಹಿತದೃಷ್ಟಿಯಿಂದ ಸೇವೆಯಿಂದ ತೆಗೆದುಹಾಕಿದ ನಿರುದ್ಯೋಗಿಗಳನ್ನು ಪುನಃ ನೇಮಕಾತಿ ಮಾಡಿಕೊಳ್ಳಲಾಗುವುದೇ ;

ಏ) ಈ ಕಾಲೇಜಿನಲ್ಲಿ ನೇಮಾತಿ ಮಾಡಿಕೊಳ್ಳುವಾಗ ವ್ಯಾಪಕವಾಗಿ ಭ್ರಷ್ಟಾಚಾರ ನಡೆದಿರುವುದು ನಿಜವೇ ; ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಶ್ರೀರಾಮುಲು (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು.

ಆ) ವೆಚ್ಚದ ವಿವರ ಈ ಕೆಳಕಂಡಂತೆ ಇದೆ :

1. ಸಿಬ್ಬಂದಿ ಮತ್ತು ಕಛೇರಿ	–	8.07 ಕೋಟಿ.
2. ಉಪಕರಣಗಳ ಖರೀದಿ	–	6.75 ಕೋಟಿ
3. ಮೊದಲನೇ ಹಂತದ ಕಾಲೇಜು ಮತ್ತು ಹಾಸ್ಟಲ್ ನಿರ್ಮಾಣ	–	26.33 ಕೋಟಿ
ಒಟ್ಟು	–	41.15 ಕೋಟಿ

ಇ) ಬೋಧಕ ಹುದ್ದೆಗಳು – 210

ಬೋಧಕೇತರ ಹುದ್ದೆಗಳು – 530

ಒಟ್ಟು – 740

ಈ)

	ಬೋಧಕ	ಬೋಧಕೇತರ
ಖಾಯಂ –	81	173
ತಾತ್ಕಾಲಿಕ –	58	14
ಖಾಲಿ –	76	338
ಒಟ್ಟು –	215	525

ಉ) ಮೀಸಲಾತಿ ಹಾಗೂ ಮೆರಿಟ್ ಮತ್ತು ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ.

ಊ) ಹೌದು.

ಋ) ಹೌದು, ನಿಯೋಜನೆ/ನೇಮಕಾತಿ ಆದೇಶ ಪಡೆದು ಕರ್ತವ್ಯಕ್ಕೆ ವರದಿಮಾಡಿಕೊಳ್ಳಲಿಲ್ಲವಾದ್ದರಿಂದ.

ಎ) ಇಲ್ಲ.

ಏ) ಇಲ್ಲ.

ಪ್ರಶ್ನೋತ್ತರ

ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಬೀದರ್) :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಂಥ ಉತ್ತರದಲ್ಲಿ ಸಿಬ್ಬಂದಿಯವರ ನೇಮಕಾತಿ ಏನಾಗಿದೆ ಅದರಲ್ಲಿ ಕರ್ನಾಟಕದವರು ಎಷ್ಟು ಜನರು ಇದ್ದಾರೆ ಮತ್ತು ಮಹಾರಾಷ್ಟ್ರದವರು ಎಷ್ಟು ಜನರು ಇದ್ದಾರೆ ಎಂಬ ಬಗ್ಗೆ ಹೇಳಬೇಕು, ಮತ್ತು ಬೀದರ್ ಮೆಡಿಕಲ್ ಕಾಲೇಜಿನಲ್ಲಿ 6 ಕೋಟಿ 75 ಲಕ್ಷ ರೂಪಾಯಿಗಳ ಉಪಕರಣಗಳು ಏನು ಖರೀದಿಯಾಗಿದೆ ಇದರ ಬಗ್ಗೆ ಸಾಕಷ್ಟು ದೂರುಗಳು ಇವೆ. ಕಳಪೆ ಮಟ್ಟದ ಉಪಕರಣಗಳನ್ನು ಖರೀದಿ ಮಾಡಿದ್ದಾರೆಂದು, ಈ ವಿಷಯ ಮಾನ್ಯ ಸಚಿವರ ಮತ್ತು ಸರ್ಕಾರದ ಗಮನಕ್ಕೆ ಬಂದಿದೆಯೆ ? ಇನ್ನು ನೇಮಕಾತಿಯಲ್ಲಿ ಏನೊಂದು ಸಾಮಾನ್ಯ ಪರೀಕ್ಷೆ ಮುಖಾಂತರ ನೇಮಕಾತಿಯನ್ನು ಮಾಡಲಾಯಿತು ಮೊದಲೇ ಕೆಲವೊಂದು ಯಾರು ಇಂಟರ್‌ವ್ಯೂ ಕೊಡುವವರಿದ್ದಾರೆ ಅಂಥವರಿಗೆ ಒಂದು ಸಲ ಪ್ರಶ್ನೆಗಳನ್ನು ಲೀಕ್ ಮಾಡಿ ಮತ್ತೆ ಪುನಃ ಎಕ್ಸಾಂ ಮಾಡಿ ಅದರಲ್ಲಿ ಸಾಕಷ್ಟು ಅವ್ಯವಹಾರ ಮಾಡಿ ಇನ್ನೂ ಅನೇಕ ಜನ ಓಡಾಡುತ್ತಿದ್ದಾರೆ. 1 ಲಕ್ಷ, 2 ಲಕ್ಷ ರೂಪಾಯಿ, ಹೀಗೆ ಸುಮಾರು ಭ್ರಷ್ಟಾಚಾರ ಇದರಲ್ಲಿ ನಡೆದಿದೆ. ಕಸ್ತೂರಿ ಟಿ.ವಿ. ಚಾನಲ್‌ನಲ್ಲಿ ಇದರ ಬಗ್ಗೆ ಒಂದು ಸಿ.ಡಿ. ಯನ್ನೇ ಮಾಡಿಕೊಟ್ಟಿದ್ದಾರೆ. ಇದರ ಬಗ್ಗೆ ಮಾಧ್ಯಮಗಳಲ್ಲಿ ಸಾಕಷ್ಟು ವರದಿಗಳು ಆಗಿವೆ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಮೇಲೆ ಏನು ಕ್ರಮವಾಗಿದೆ? ಅಥವಾ ನಿರ್ದಿಷ್ಟವಾದಂಥ ಒಂದು ಎವಿಡೆನ್ಸ್ ಪ್ರಕಾರ ದೂರು ಕೊಟ್ಟರೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ? ಎನ್ನುವುದರ ಬಗ್ಗೆ ಮಾನ್ಯ ಸಚಿವರು ಮಾಹಿತಿ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ರಾಮಚಂದ್ರ ಗೌಡ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮೆಡಿಕಲ್ ಕಾಲೇಜುಗಳಲ್ಲಿ ಸಮಸ್ಯೆ ಇರುವುದು ಅಧ್ಯಾಪಕರ ಕೊರತೆ. ಯಾರು ಯಾರು ಉನ್ನತ ವ್ಯಾಸಂಗ ಮಾಡಿದ್ದಾರೆ ಅಂಥವರು ದೊರಕದೆ ಕೊರತೆಯಾಗಿದೆ. ಹೀಗಾಗಿ ನಾವು ನಮ್ಮ ರಾಜ್ಯದಲ್ಲಿ ನಾವು ಉನ್ನತ ವ್ಯಾಸಂಗ ಮಾಡಿದಂಥ ಹೊರಗಿನ ರಾಜ್ಯದಿಂದ ಬರತಕ್ಕಂಥವರನ್ನು ಅಟ್ರ್ಯಾಕ್ಟ್ ಮಾಡುವುದಕ್ಕೋಸ್ಕರವಾಗಿ ಹಿಂದಿನ ಸಮ್ಮಿಶ್ರ ಸರ್ಕಾರದಲ್ಲಿಯೇ ನಾವು ಸಂಬಳ ಜಾಸ್ತಿ ಮಾಡಿ ಅವರು ಬರುವಂತೆ ಅಟ್ರ್ಯಾಕ್ಷನ್ ಮಾಡಿದ್ದೇವೆ. ಇವೊತ್ತು ಎಂ.ಸಿ.ಐ. ನಲ್ಲಿ ಯಾವುದೇ ಕಾಲೇಜಿಗೆ ಆದ್ಯತೆ ಕೊಡಬೇಕಾದರೆ ಪ್ರತಿ ವರ್ಷ ಅವರು ಇನ್ಸ್‌ಪೆಕ್ಟ್ ಮಾಡುತ್ತಾರೆ. ತಮಗೆ ಗೊತ್ತಿದೆ, ಮೊನ್ನೆ ನಮ್ಮ ಹೊಸ ಆರು ಕಾಲೇಜುಗಳ

ಬಗ್ಗೆ ನಮಗೆ ಅವರು ಸರ್ಟಿಫೈ ಮಾಡಬೇಕಾದರೆ ಅಧ್ಯಾಪಕರ, ಪ್ರೊಫೆಸರ್‌ಗಳ ಮತ್ತು ಎಲ್ಲಾ ಇನ್‌ಫ್ರಾಸ್ಟ್ರಕ್ಚರ್‌ಗಳ ಕೊರತೆ ಬಹಳ ಇತ್ತು. ಒಂದು ವರ್ಷದೊಳಗೆ ಎಲ್ಲ ಮಾಡಬೇಕೆಂದರೆ ಬಹಳ ಸಾಹಸ ಮಾಡಿ ಸರ್ಕಾರ ಈ ಕೆಲಸವನ್ನು ಮಾಡಿದೆ. ಇವೊತ್ತು ಬೀದರ್‌ನ ಕಾಲೇಜಿಗೆ ನಮಗೆ ಅಧ್ಯಾಪಕರ ಕೊರತೆ ಇದ್ದಂಥ ಕಾರಣ ಅಲ್ಲಿಯ ಸಿಬ್ಬಂದಿ ಮಹಾರಾಷ್ಟ್ರದವರನ್ನು ಕರೆದುಕೊಂಡು ಬಂದಿದ್ದಾರೆ. ಈ ರೀತಿ ಮಾಡದೇ ಇದ್ದರೆ ಎಂ.ಸಿ.ಐ. ಪರ್ಮಿಶನ್ ಇಲ್ಲದೇ ಕಾಲೇಜ್‌ನ್ನೇ ರನ್ ಮಾಡುವಂತಿಲ್ಲ. ನಾವು ಸಿ.ಇ.ಟಿ. ಮುಖಾಂತರ ಸ್ಟೂಡೆಂಟ್ಸ್‌ನ್ನು ಕಾಲೇಜಿಗೆ ಕಳುಹಿಸಿಬಿಟ್ಟಿದ್ದೇವೆ. ಸ್ಟೂಡೆಂಟ್ಸ್‌ಗಳಿಗೆ ಸರಿಯಾಗಿ ಪಾಠವಾಗಬೇಕು ಎಂದರೆ ಅಧ್ಯಾಪಕರು ಬೇಕು. ಅಧ್ಯಾಪಕರು ಇಲ್ಲದಿದ್ದರೆ ಎಂ.ಸಿ.ಐ. ಪರ್ಮಿಶನ್ ಕೊಡುವುದಿಲ್ಲ. ಅನೇಕ ಸಲ ನಾವು ನಮ್ಮ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿದ್ದವರು ಬರುವುದಕ್ಕೆ ಬಹಳ ಕಷ್ಟ ಬೀಳುತ್ತಾರೆ. ಏಕೆಂದರೆ ಅವರಿಗೆ ಪ್ರಾಕ್ಟೀಸ್ ಚೆನ್ನಾಗಿದೆ. ಒಳ್ಳೊಳ್ಳೆ ಕ್ವಾಲಿಫಿಕೇಶನ್ ಇರುವಂಥ ಡಾಕ್ಟರ್‌ಗಳಿಗೆ ಪ್ರಾಕ್ಟೀಸ್ ಚೆನ್ನಾಗಿರುವುದರಿಂದ ಪಾಠ ಮಾಡುವುದಕ್ಕೆ ಬರುತ್ತಿಲ್ಲ. ಅಂಥವರಿಗೂ ಕೂಡ ಸಂಬಳ ಜಾಸ್ತಿ ಕೊಡಬೇಕೆಂದು ಕಳೆದ ಸಮ್ಮಿಶ್ರ ಸರ್ಕಾರದಲ್ಲಿ ನಾವು ಸಂಬಳ ಜಾಸ್ತಿ ಮಾಡುವುದಕ್ಕೆ ಆದ್ಯತೆಯನ್ನು ಕೊಟ್ಟು ಸಂಬಳವನ್ನು ಜಾಸ್ತಿ ಮಾಡಿ ಅವರನ್ನು ಕರೆದುಕೊಂಡು ಬಂದೆವು.

ಶ್ರೀ ರಾಮಚಂದ್ರ ಗೌಡ : ಮೊನ್ನೆ ರಾಯಚೂರಿನ ವಿಚಾರದಲ್ಲಿ MCI ನವರು permission ಕೊಡಲಿಲ್ಲ, ನಮಗೆ 8% infrastructure shortage ಇತ್ತು. ಅವರು ಏನು ಮಾಡಿದರು ಎಂದರೆ ಇನ್ನೊಂದು ಸಲ ಒತ್ತಡ ಮಾಡಿದಾಗ, ನಾವು ರಾಯಚೂರು ಕಾಲೇಜಿಗೆ permission ಕೊಡುವುದೇ ಇಲ್ಲವೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಬಿಟ್ಟರು. ನಾವು ಕೇಂದ್ರ ಸರ್ಕಾರದ ಮಂತ್ರಿಗಳ ಹತ್ತಿರ ಹೋಗಿ ಅವರನ್ನು convince ಮಾಡಿ undertaking ಕೊಟ್ಟು, ನಾವು ಎಲ್ಲಿಂದಾದರೂ ಹೊರಗಡೆಯಿಂದ professorಗಳನ್ನು ತೆಗೆದುಕೊಂಡು ಬಂದು ಇಲ್ಲಿ ಮಾಡುತ್ತೇವೆಂದು ಹೇಳಿ, ಪುನಃ ಇವತ್ತು ಅವರಿಂದ permission ತೆಗೆದುಕೊಂಡಿದ್ದೇವೆ. ಏಕೆಂದರೆ ನಾವು ಈಗಾಗಲೇ ಕರ್ನಾಟಕದಲ್ಲಿ ಬೆಂಗಳೂರಿನಿಂದ 100 ವಿದ್ಯಾರ್ಥಿಗಳನ್ನು ಅಲ್ಲಿಗೆ ಕಳುಹಿಸಿಬಿಟ್ಟಿದ್ದೇವೆ. ಕೊರತೆ ಬಹಳ ಇದೆ. ನಾವು building ಅನ್ನು ಹೇಗೋ ಮಾಡಿಬಿಡುತ್ತೇವೆ. ಅದಕ್ಕೆ ನಮ್ಮ ಮಾನ್ಯ ಗೌರವಾನ್ವಿತ ಸದಸ್ಯರು ಅಲ್ಲಿ corruption ಏನು ನಡೆದಿದೆ ಎಂದು ಹೇಳುತ್ತಾರೆ, corruption ಸಮಸ್ಯೆಯೇ ಬರುವುದಿಲ್ಲ. ನಾವು ಯಾರಾದರೂ ಬರುತ್ತಾರ ಎಂದು ಕಾಯುತ್ತಿದ್ದೇವೆ. ಯಾರಾದರೂ ಬಂದರೆ ಸಾಕು ಎಂದು ನಾವು ಕಾಯ್ದುಕೊಂಡಿರುವಂತಹ

ಪರಿಸ್ಥಿತಿಯಲ್ಲಿ, ನಾವೇ ಅವರಿಗೆ ಹೆಚ್ಚು ಹಣ ಕೊಟ್ಟು ಕರೆದುಕೊಂಡು ಬರಬೇಕೆ ವಿನಃ ಅವರಿಂದ ಹಣವನ್ನು ತೆಗೆದುಕೊಳ್ಳುವಂತಹ ಪರಿಸ್ಥಿತಿ ಇಲ್ಲಿ ಒದಗಿಬಂದಿಲ್ಲ. ಹೀಗಾಗಿ ಆ ಸಮಸ್ಯೆ ಇಲ್ಲಿ ಉದ್ಭವಿಸುವುದಿಲ್ಲ. ಅನೇಕ ನಿಮ್ಮ ಪ್ರಶ್ನೆಗಳಿಗೆ ನಾನು ಉತ್ತರವನ್ನು ಸರಿಯಾಗಿ ಕೊಟ್ಟಿದ್ದೇನೆ. ಕೆಲವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ, ಅವರು ಬಂದು report ಮಾಡಿಕೊಳ್ಳುವುದಿಲ್ಲ. ಆ ರೀತಿ report ಮಾಡಿಕೊಳ್ಳದೆ ಇರುವವರನ್ನು ಏನೂ ಮಾಡುವುದಕ್ಕೂ ಆಗುವುದಿಲ್ಲ, ಆಗ ಅವರನ್ನು ಕೈಬಿಡಬೇಕಾಗುತ್ತದೆ. ಅಲ್ಲಿ ಇನ್ನೂ ಕೆಲವು ಕೊರತೆಗಳಿವೆ. ಯಾರಾದರೂ ಸರಿಯಾಗಿ training ಆಗಿರುವಂತಹ professors ಇದ್ದರೆ ನಾವು ಈಗಲೂ ಅವರನ್ನು ತೆಗೆದುಕೊಳ್ಳುತ್ತೇವೆ, ದಯಮಾಡಿ ಕಳುಹಿಸಿಕೊಡಿ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಯಾವ faculty ಯಲ್ಲಿ ಸ್ಥಳೀಯರು ಲಭ್ಯವಿಲ್ಲ, ಅಲ್ಲಿ ಮಾತ್ರ ಹೊರಗಿನವರನ್ನು ನೇಮಕಾತಿ ಮಾಡುವುದಕ್ಕೆ ಯಾರದೂ ಅಭ್ಯಂತರವಿಲ್ಲ. ಸ್ಥಳೀಯರು ಲಭ್ಯವಿದ್ದರೂ ಕೂಡ ಬೇಕೆಂದೆ ತಮ್ಮ vested interest ಇಟ್ಟುಕೊಂಡು ಹೊರಗಿನವರಿಗೆ ನೇಮಕಾತಿ ಮಾಡಿದ್ದಾರೆ. ಎರಡನೆಯದಾಗಿ ಸ್ಥಳೀಯವಾಗಿ ಬೋಧಕೇತರ ನೇಮಕಾತಿಯನ್ನು ಮಾಡಿದ್ದಾರೆ, ಅಲ್ಲಿ ನಿರ್ದಿಷ್ಟವಾದಂತಹ ಭ್ರಷ್ಟಾಚಾರದ ಆರೋಪಗಳಿವೆ. ಮಾನ್ಯ ಮಂತ್ರಿಗಳು ಭೇಟಿ ಕೊಟ್ಟಾಗ ಅವರ ಗಮನಕ್ಕೆ ಬಂದಿದೆ ಎಂದು ನನ್ನ ಅನಿಸಿಕೆ ಇದೆ. ಇದಾದಮೇಲೆ ಅಲ್ಲಿ ಏನು ಉಪಕರಣಗಳನ್ನು ಖರೀದಿ ಮಾಡಿದ್ದಾರೆ, ಅದು ಒಂದನೇ ವರ್ಷಕ್ಕೆ ಹಾಗೂ ಎರಡನೇ ವರ್ಷಕ್ಕೆ ಎಷ್ಟು ಉಪಕರಣಗಳು ಬೇಕು, MCI ಗೆ ಎಷ್ಟು ಉಪಕರಣಗಳನ್ನು ತೋರಿಸಬೇಕಾಗುತ್ತದೆ, ಅಷ್ಟೇ ಖರೀದಿ ಮಾಡಿದ್ದರೆ ಯಾರದೂ ಅಭ್ಯಂತರವಿಲ್ಲ. ಆದರೆ ನಾಲ್ಕು ವರ್ಷಕ್ಕೆ ಬೇಕಾಗುವಂತಹ ಹಾಗೂ ಬೇಕಾಗದೆ ಇರುವಂತಹ ಕೆಲವು ಕಳಪೆ ಮಟ್ಟದ ಉಪಕರಣಗಳನ್ನು ಖರೀದಿ ಮಾಡಿದ್ದಾರೆಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅದರ ಜೊತೆಗೆ ನಿರ್ದಿಷ್ಟವಾದಂತಹ ಮೇಲ್ನೋಟಕ್ಕೆ ಸಾಬೀತು ಆಗುವಂತಹ ದೂರುಗಳಿವೆ. ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತಾರೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಅಲ್ಲಿ ಆರು ಕೋಟಿ ರೂಪಾಯಿ ಭ್ರಷ್ಟಾಚಾರವಾಗಿದ್ದಂತೂ ನಿಜ. ತಾವು enquiry ಮಾಡಿ, ಇದರ ಬಗ್ಗೆ ಬೇಕಾದಷ್ಟು proof ಗಳು ಸಿಗುತ್ತವೆ. ಆರು ಕೋಟಿ ರೂಪಾಯಿ ಸಾಮಾನುಗಳನ್ನು ಕೆಲಸಕ್ಕೆ ಬೇಕೆಂದು ಏನು ಖರೀದಿ ಮಾಡಿದ್ದಾರೆ, ಆ ಸಾಮಾನುಗಳು ಯಾವುದೇ ಕೆಲಸಕ್ಕೂ ಕೂಡ ಬರುವುದಿಲ್ಲ. ಅವುಗಳನ್ನು ನಾಲ್ಕು ದಿವಸ ಇಟ್ಟುಕೊಂಡು ಬಿಸಾಡಬೇಕು. ಅಲ್ಲಿ ಒಳ್ಳೆಯ ಕೆಲಸವಾಗಿದೆ, ಅದಕ್ಕೆ ಧನ್ಯವಾದಗಳು. ಅಲ್ಲಿ ನಿಯಮಗಳು ಇರಲಿಲ್ಲ, ನಿಯಮಗಳನ್ನು ಮಾಡಿದ್ದೀರಿ.

ನಿಯಮಗಳನ್ನು ಪಾಲನೆ ಮಾಡಿದ್ದೀರಿ. ನಾನೂ ಕೂಡ ಅದರ ಉಪಾಧ್ಯಕ್ಷನಾಗಿದ್ದೆನು. ಅದನ್ನು ನಾನು ಹಾಗೂ ಮಾನ್ಯ ಧರ್ಮ್ ಸಿಂಗ್‌ರವರು ಇದ್ದಂತಹ ಕಾಲದಲ್ಲಿ ಪ್ರಾರಂಭ ಮಾಡಿದ್ದು.

ಅಧ್ಯಕ್ಷರು : ಗುರುಪಾದಪ್ಪನವರೇ, ತಾವು specific ಆಗಿ ಪ್ರಶ್ನೆಯನ್ನು ಕೇಳಿ. Detail ಆಗಿ ಮತನಾಡಿದರೆ question hour ಆಗುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಪ್ರಶ್ನೆಯನ್ನೇ ಕೇಳುತ್ತಿರುವುದು. ಅಲ್ಲಿ ಅವ್ಯವಹಾರ ಆಗಿದ್ದು ನಿಜ ಎಂದು ಹೇಳುತ್ತಿದ್ದೇನೆ. ಅವ್ಯವಹಾರ ಆಗಿದ್ದು ನಿಜ, ಅದನ್ನು enquiry ಮಾಡಬೇಕು. ಅಲ್ಲಿ ಸಾಮಾನು ಏನು ಖರೀದಿ ಮಾಡಿದ್ದಾರೆ, ಅದು ಒಳ್ಳೆಯ ಸಾಮಾನುಗಳಲ್ಲ, ಕಳಪೆ ಸಾಮಾನುಗಳನ್ನು ಖರೀದಿ ಮಾಡಿದ್ದಾರೆ. ಅದರ ಬಗ್ಗೆ ತನಿಖೆ ಮಾಡಬೇಕು. ಇನ್ನೊಂದು ವಿಚಾರವೇನೆಂದರೆ ಅಲ್ಲಿ ಸಣ್ಣಸಣ್ಣ ಹುದ್ದೆಗಳು ಇವೆ, ಆ ಹುದ್ದೆಗಳನ್ನು ತುಂಬುವುದಕ್ಕೆ ಮೂರು ಲಕ್ಷ ರೂಪಾಯಿ ತೆಗೆದುಕೊಂಡು ಅವರನ್ನು ಇಟ್ಟುಕೊಂಡು ಮೂರು ದಿನದಲ್ಲಿ ತೆಗೆದು ಹಾಕುತ್ತಾರೆ. ಮತ್ತೆ ಬೇರೆಯವರಿಗೆ ಕರೆಯುತ್ತಾರೆ, ದಲಿತ ಹುಡುಗರೆಲ್ಲ ಸಾಯುತ್ತಿದ್ದಾರೆ, 8 ಲಕ್ಷ, 9 ಲಕ್ಷ ರೂಪಾಯಿ ಕೊಡಬೇಕು ಎಂದರೆ, ಎಷ್ಟು ಸಾರಿ ಕೊಡುತ್ತಾರೆ ? ಒಂದು ಸಾರಿ ಕೊಡುತ್ತಾರೆ ಅಲ್ಲಿ 3 ಲಕ್ಷ ರೂಪಾಯಿ ಕೊಡಬೇಕು, ಅವರನ್ನು ಎಂಟು ದಿವಸ ಇಟ್ಟುಕೊಳ್ಳುತ್ತಾರೆ, ಅವರನ್ನು ತೆಗೆದುಹಾಕುತ್ತಾನೆ. ಮತ್ತೆ ಎಂಟು ದಿವಸ ಬಿಟ್ಟು interview ಕರೆಯುತ್ತಾನೆ, ಮತ್ತೆ ಅವರಿಂದ ಮೂರು ಲಕ್ಷ ರೂಪಾಯಿ ತೆಗೆದುಕೊಂಡು ಅವರನ್ನು ಸೇರಿಸಿಕೊಳ್ಳುತ್ತಾನೆ. ಇಂತಹ ವ್ಯವಹಾರ ಏನು ನಡೆದಿದೆ, ಈ ವ್ಯವಹಾರದ ಬಗ್ಗೆ ಕೂಲಂಕಷವಾಗಿ ತನಿಖೆಯಾಗಬೇಕು. ತನಿಖೆಯಾಗಲಿಲ್ಲವೆಂದರೆ ಕಾಲೇಜು ಉಳಿಯುವುದಿಲ್ಲ. ಕಾಲೇಜು ಆಗಿದ್ದು ಒಳ್ಳೆಯದಾಯಿತು, ಬಹಳ ಧನ್ಯವಾದಗಳು, ಕಾಲೇಜು ಎಲ್ಲರಿಗೂ ಬೇಕಾಗಿದೆ. ಆದರೆ ಆ ಕಾಲೇಜಿಗೆ ಕಲಿಸಿಕೊಡುವುದಕ್ಕೆ ಒಳ್ಳೆಯ ಅಧ್ಯಾಪಕರು ಸಿಗುತ್ತಿಲ್ಲ. ಇನ್ನೊಂದು ಏನಾಗಿದೆ ಎಂದರೆ ಬೋಧಕ ಹುದ್ದೆಗಳು 210, ಬೋಧಕೇತರ ಹುದ್ದೆಗಳು 530 ಇವೆ. ಬೋಧಕೇತರ ಹುದ್ದೆಗಳಲ್ಲಿ ಏನು ಮಾಡಿದ್ದಾರೆ ಎಂದರೆ 30 ಸಾವಿರ ಅವರಿಗೆ ಕೊಡುತ್ತಾರೆ, 20 ಸಾವಿರ ಇವರು ತೆಗೆದುಕೊಳ್ಳುತ್ತಾರೆ. ಪ್ರತಿತಿಂಗಳು ಅವರು ಬರುತ್ತಾರೆ, ಸೈನ್ ಮಾಡಿ ಹೋಗುತ್ತಾರೆ, ಅವರು ಅಲ್ಲಿ ಇರುವುದಿಲ್ಲ. ಬಂದು ಸೈನ್ ಮಾಡಿ 20 ಸಾವಿರ ಇವರಿಗೆ, 30 ಸಾವಿರ ಅವನಿಗೆ, ಇದರ ಬಗ್ಗೆ ತಾವು ಕೂಲಂಕಷವಾಗಿ ತನಿಖೆ ಮಾಡುತ್ತೇವೆಂದು ಹೇಳಿ. ಅಲ್ಲಿ ಏನೂ ನಡೆದಿಲ್ಲವೆಂದು ದಯವಿಟ್ಟು ಹೇಳಬೇಡಿ.

ಶ್ರೀ ರಾಮಚಂದ್ರ ಗೌಡ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರುಗಳಾದ ನಾಗಮಾರಪಲ್ಲಿಯವರು ಹಾಗೂ ಈಶ್ವರ್ ಖಂಡ್ರೆಯವರು ಏನು ವಿಚಾರಗಳನ್ನು ಹೇಳಿದ್ದಾರೆ, ಅದರ ವಿವರಗಳನ್ನು ಒದಗಿಸಿದರೆ ನಾವು ಖಂಡಿತವಾಗಿ ವಿಚಾರಣೆಯನ್ನು ಮಾಡಿಸುತ್ತೇನೆ. ವಿಚಾರಣೆಯನ್ನು ಮಾಡಿಸುವಂತಹ ಸಂದರ್ಭದಲ್ಲಿ ಇವರಿಬ್ಬರನ್ನೂ ಕೂಡ ನಾನು ಜೊತೆಯಲ್ಲೇ ಕರೆದುಕೊಂಡು ಹೋಗಿ ಆ ಕಾಲೇಜನ್ನು inspect ಮಾಡಿ, ಯಾವ್ಯಾವ ಸಾಮಾನುಗಳನ್ನು purchase ಮಾಡಿದ್ದಾರೆ ? ಯಾವಾಗ purchase ಮಾಡಿದ್ದಾರೆ ? ಎಲ್ಲಿಂದ purchase ಮಾಡಿದ್ದಾರೆ ? ಹೇಗೆ purchase ಮಾಡಿದ್ದಾರೆ ? ಅದು ಹೇಗೆ ಉಪಯೋಗಕ್ಕೆ ಬರುತ್ತಿಲ್ಲವೆನ್ನುವ ಅಂಶಗಳನ್ನು ನಿಮ್ಮಿಬ್ಬರ ಸಮಕ್ಷಮದಲ್ಲಿ ನಾನೇ ಬಂದು ಅಲ್ಲಿ ಪರೀಕ್ಷೆ ಮಾಡುತ್ತೇನೆ.

(215) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಶಿರ್ವ ಸಮುದಾಯ ಆಸ್ಪತ್ರೆಯ ನಾಮಫಲಕವಿದ್ದರೂ, ಇದುವರೆಗೂ ಸಮುದಾಯ ಆಸ್ಪತ್ರೆಗೆ ಮೂಲಭೂತ ಸೌಲಭ್ಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಈ ಆಸ್ಪತ್ರೆಯಲ್ಲಿ ಒಳರೋಗಿಗಳ ದಾಖಲಾತಿಗೆ ಅವಕಾಶವಿದ್ದರೂ, 30 ಹಾಸಿಗೆ ಇರುವ ಕೊಠಡಿಗಳಿದ್ದರೂ, ವೈದ್ಯರ ಹಾಗೂ ಸಿಬ್ಬಂದಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ಆಸ್ಪತ್ರೆಯಲ್ಲಿ ಒಳರೋಗಿಗಳ ದಾಖಲಾತಿ ಹಾಗೂ ರಾತ್ರಿ ವೇಳೆಯಲ್ಲಿಯೂ ರೋಗಿಗಳನ್ನು ದಾಖಲಾಗಿಸಿ, ಚಿಕಿತ್ಸೆ ನೀಡಿ ಪೂರ್ಣ ಪ್ರಮಾಣದ ವ್ಯವಸ್ಥೆ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ;

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಸದರಿ ಆಸ್ಪತ್ರೆ ಕಟ್ಟಡ ನವೀಕರಣ ಮತ್ತು ವಿಸ್ತರಣಾ ಕಾಮಗಾರಿಗಳನ್ನು ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣೆ ಪ್ರಾಯೋಜನೆ ವತಿಯಿಂದ ಪೂರ್ಣಗೊಳಿಸಲಾಗಿದೆ.

ಇತ್ತೀಚಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಾರ್ವಜನಿಕ ಆರೋಗ್ಯ ಗುಣಮಟ್ಟಕ್ಕೆ ಅಭಿವೃದ್ಧಿ ಪಡಿಸಲು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ದಡಿಯಲ್ಲಿ